ಈ) ಈ ಕ್ಷೇತ್ರದಲ್ಲಿ ನೀರಾವರಿಯ ಪ್ರದೇಶದ ವಿಸ್ತೀರ್ಣ ಎಷ್ಟು ? ಮತ್ತು ಉಳಿದ ಪ್ರದೇಶದ ವಿಸ್ತೀರ್ಣ ಎಷ್ಟು ?

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳ ಅಚ್ಚುಕಟ್ಟನ್ನು ಕಬಿನಿ ಯೋಜನೆಯ ಅಚ್ಚುಕಟ್ಟಿನಲ್ಲಿ ಸೇರಿಸಿಕೊಂಡಿದ್ದು ಯೋಜನೆಯ ವರದಿಯಂತೆ ಅರೆ ನೀರಾವರಿ ಎಂದು ಘೋಷಿಸಲಾಗಿದೆ.

ಆ) ಈ ಬಗ್ಗೆ ಅಚ್ಚುಕಟ್ಟುದಾರರ ಮನವಿ ಬಂದಿದ್ದು, ಪರಿಶೀಲನೆಯಲ್ಲಿದೆ.

ಇ) ಅಚ್ಚುಕಟ್ಟುದಾರರ ಮನವಿಯ ಮೇರೆಗೆ ವಿತರಣಾ ನಾಲೆ 41ರಿಂದ 60 ರವರೆವಿಗೂ ಪೂರ್ಣ ನೀರಾವರಿ ಬೆಳೆ ಬೆಳೆಯುವಂತೆ ಬೆಳೆ ಪದ್ಧತಿಯ ಬದಲಾವಣೆಯ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಈ) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಬಿನಿ ಯೋಜನೆಯ ಒಟ್ಟು 52700 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಇದರಲ್ಲಿ 3000 ಎಕರೆ ಪೂರ್ಣ ನೀರಾವರಿ ಮತ್ತು 49700 ಎಕರೆ ಅರೆ ನೀರಾವರಿ ಅಚ್ಚುಕಟ್ಟು ಪ್ರದೇಶವಿರುತ್ತದೆ.

ಕಬಿನಿ ಜಲಾಶಯದ ನಾಲೆಗಳಲ್ಲಿ ಹೂಳೆತ್ತುವುದು

4504 - ಶ್ರೀ ಜಿ.ಎನ್. ನಂಜುಂಡಸ್ವಾಮಿ (ಕೊಳ್ಳೇಗಾಲ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಬಿನಿ ಜಲಾಶಯದ ನಾಲೆಗಳಲ್ಲಿ ಹೂಳೆತ್ತುವ ಮತ್ತು ಲೈನಿಂಗ್ ಕಾರ್ಯಗಳು ಪೂರ್ಣಗೊಳ್ಳದಿರುವುದರಿಂದ ಅಂತಿಮ ಹಂತದವರೆಗೆ ನೀರು ಪೂರೈಕೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ದಿಶೆಯಲ್ಲಿ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮವೇನು ?

ಇ) ಇದುವರೆಗೂ ಈ ಕಾರ್ಯವನ್ನು ಕೈಗೊಳ್ಳದಿರಲು ಕಾರಣವೇನು ?

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಬಂದಿದೆ.

ಆ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಪ್ರತಿ ವರ್ಷ ಲೈನಿಂಗ್ ಮತ್ತು ಹೂಳೆತ್ತುವ ಕಾರ್ಯವನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಯನ್ನು ಆಧರಿಸಿ ಅತ್ಯಂತ ಅವಶ್ಯಕತೆ ಇರುವ ಸ್ಥಳಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.